## ಉಪತಹಶೀಲ್ದಾರರು, ನಾಡ ಕಾರ್ಯಾಲಯ, ಇಟ್ಟಿಗಿ ರವರ ನ್ಯಾಯಾಲಯ

| ಅರ್ಜಿದಾರರು | ತಕರಾರುದಾರರು |
|---|---|
| ಸಿ.ಗುರುಬಸವರಾಜ ತಂದೆ ಲೇಟ್ ಕೊಟ್ರಪ್ಪ,<br>ಮನೆ ಸಂ.5, ವಾರ್ಡ್ ನಂ.6, ಕುಂಬಾರ ಓಣಿ,<br>ಕೊಟ್ಟೂರು, ಕೂಡ್ಲಿಗಿ ತಾ. | 1.ಬನ್ನಿಮಟ್ಟಿ ನಿಂಗಮ್ಮ ಗಂಡ ಚಂದ್ರಪ್ಪ<br>2.ಬನ್ನಿಮಟ್ಟಿ ಕರಿಬಸವರಾಜ ತಂದೆ ಚಂದ್ರಪ್ಪ,<br>ಇಟ್ಟಿಗಿ ಗ್ರಾಮ, ಹಡಗಲಿ ತಾ. |

ವಿವಾದಿತ ಜಮೀನಿನ ವಿವರ

| ಕ್ರ.ಸಂ. | ಗ್ರಾಮದ ಹೆಸರು | ಸ.ನಂ. | ವಿಸ್ತೀರ್ಣ | ತರಹೆ |
|---|---|---|---|---|
| 1. | ಇಟ್ಟಿಗಿ | 153/1 | 0-46 | ಖುಷ್ಕಿ |

ಪೀಠಿಕೆ :

ಬಳ್ಳಾರಿ ಜಿಲ್ಲೆ ಹೂವಿನಹಡಗಲಿ ತಾಲೂಕಿನ ಇಟ್ಟಿಗಿ ಗ್ರಾಮದ ಸ.ನಂ.153/1 ವಿಸ್ತೀರ್ಣ 0-46 ಎಕ್ರೆ ಜಮೀನಿಗೆ ಸಂಬಂಧಿಸಿದಂತೆ, ಮಾನ್ಯ ಸಹಾಯಕ ಆಯುಕ್ತರು, ಹೊಸಪೇಟೆ ಇವರ ಅನುಮೋದನೆಯಂತೆ ಹಳೇ ಕ್ರಯ ಪತ್ರದ ಪ್ರಕಾರ ಕ್ರಯ ದಸ್ತಾವೇಜು ಸಂ.541/93-94 ದಿನಾಂಕ 1-3-1994 ರಂದು ನಿಂಗಮ್ಮ ಗಂಡ ಬನ್ನಿಮಟ್ಟಿ ಚಂದ್ರಪ್ಪ ಇವರಿಂದ ಗುರುಬಸವರಾಜ ತಂದೆ ಕೊಟ್ಟೂರು ಚೆಟ್ರಿಕಿ ಕೊಟ್ರಪ್ಪ ಇವರು ರೂ.13,000/- ಗಳಿಗೆ ಖರೀದಿಸಿರುತ್ತಾರೆ ಎಂದು ಉಪನೊಂದಣಾಧಿಕಾರಿಗಳು, ಹೂವಿನಹಡಗಲಿ ಇವರು ವರದಿ ಮಾಡಿರುತ್ತಾರೆ. ಗ್ರಾಮದಲ್ಲಿ ನಮೂನೆ-21 ರ ನೋಟಿಸನ್ನು ದಿನಾಂಕ 24-03-2016 ರಂದು ಜಾರಿ ಮಾಡಲಾಗಿ, ನಿಗದಿತ ದಿನಾಂಕದೊಳಗೆ ಅಂದರೆ ದಿನಾಂಕ 06-04-2016 ರಂದು ಇಟ್ಟಿಗಿ ಗ್ರಾಮದ ನಿವಾಸಿಯಾದ ನಿಂಗಮ್ಮ ಗಂಡ ಚಂದ್ರಪ್ಪ ಮತ್ತು ಕರಿಬಸವರಾಜ ತಂದೆ ಚಂದ್ರಪ್ಪ ಇವರು ತಕರಾರು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಕಾರಣ M.R.ಸಂಖ್ಯೆ 78/2015-16 ರ ಕಡತವು ವಿವಾದಿತ ಪ್ರಕರಣವೆಂದು ಪರಿಗಣಿಸಿ ಈ ಕಾರ್ಯಾಲಯಕ್ಕೆ ಕಂದಾಯ ನಿರೀಕ್ಷಕರು, ಇಟ್ಟಿಗಿ ರವರು ವರದಿ ಮಾಡಿರುತ್ತಾರೆ. ಉಭಯ ಪಕ್ಷದವರಿಗೆ ದಿನಾಂಕ 8-6-2016 ರಂದು ಹಾಜರಾಗಲು ನೋಟೀಸನ್ನು ಜಾರಿ ಮಾಡಲಾಯಿತು.

ಸದರಿ ಪ್ರಕರಣದ ವಿಚಾರಣೆಗೆ ಅರ್ಜಿದಾರರು ಮತ್ತು ತಕರಾರುದಾರರು ಹಾಜರಾಗಿರುತ್ತಾರೆ. ತಕರಾರುದಾರರು ಹಾಜರಾಗಿ ನಾವುಗಳು ರಾಜಿಯಾಗಿದ್ದು, ತಕರಾರು ಅರ್ಜಿಯನ್ನು ವಾಪಸ್ಸು ಪಡೆಯುತ್ತಿದ್ದೇವೆ ಎಂದು ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತಾರೆ. ಆದ್ದರಿಂದ ನೋಂದಾಯಿತ ಹಳೇ ಕ್ರಯಪತ್ರದಂತೆ ಅರ್ಜಿದಾರರ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಯಾವುದೇ ತಕರಾರು ಇರದಿರುವುದರಿಂದ ಈ ಕೆಳಕಂಡಂತೆ ಆದೇಶ

### ಆದೇಶ

ಸಂ/ಕಂ/ಪಹಣಿ/ವಿವಾದ/20/2015-16 ದಿನಾಂಕ 24-08-2016

ಪೀಠಿಕೆಯಲ್ಲಿ ವಿವರಿಸಿದ ಅಂಶಗಳು ಹಾಗೂ ಕಾರಣಗಳ ಹಿನ್ನೆಲೆಯಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 128 ಮತ್ತು 129 ಪ್ರಕಾರ M.R.ಸಂಖ್ಯೆ 78/2015-16 ರ ಪ್ರಕರಣದಲ್ಲಿ ನೋಂದಾಯಿತ ಹಳೇ ಕ್ರಯಪತ್ರದಂತೆ ಅರ್ಜಿದಾರರ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಆದೇಶಿಸಿದೆ.

(ಸತ್ಯಪ್ರಸಾದ ರಾವ್ ಎಂ.)
ಉಪತಹಶೀಲ್ದಾರರು,
ನಾಡ ಕಾರ್ಯಾಲಯ,
ಇಟ್ಟಿಗಿ

ಪ್ರತಿಯನ್ನು,

1. ಅರ್ಜಿದಾರರು ಮತ್ತು ತಕರಾರುದಾರು ಇವರಿಗೆ
2. ಭೂಮಿ ಕೇಂದ್ರ, ತಾಲೂಕು ಕಾರ್ಯಾಲಯ, ಹೂವಿನಹಡಗಲಿ ಇವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ
3. ಶುದ್ಧಪ್ರತಿ ಕಡತಕ್ಕೆ.